## "ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ" ಯ ಅಧ್ಯಕ್ಷರಾದ ಮಾನ್ಯ ಶ್ರೀ. ಯಲ್ಲಪ್ಪರೆಡ್ಡಿ, ಭಾಅಸೇ, (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 12–09–2008 ರಂದು ನೈಸ್ ಕಂಪನಿಯು ನಿರ್ಮಿಸುತ್ತಿರುವ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ರಸ್ತೆಯ ಅಭಿವೃದ್ಧಿಯಲ್ಲಿ, ಪರಿಸರಕ್ಕೆ ಆಗಬಹುದಾದ ಸಾಧಕ ಬಾಧಕಗಳ ಬಗ್ಗೆ ಸ್ಥಳ ಪರಿಶೀಲಿನಾ ಭೇಟಿಯ ನಡವಳಿಗಳು

ಹಾಜರಿದ್ದ ಸದಸ್ಯರು

| | |
|---|---|
| 1 | ಮಾನ್ಯ ಶ್ರೀ. ಎ.ಎಸ್. ಯಲ್ಲಪ್ಪರೆಡ್ಡಿ, *ಭಾ.ಅ.ಸೇ (ನಿ)* ಅಧ್ಯಕ್ಷರು |
| 2 | ಡಾ. ಹೆಚ್. ಪರಮೇಶ್ವರ್<br>ಪ್ರಖ್ಯಾತ ವೈದ್ಯರು |
| 3 | ಡಾ. ಡಿ.ಸಿ. ಶರ್ಮ<br>ವಿಜ್ಞಾನಿಗಳು |
| 4 | ಶ್ರೀ. ಪುಟ್ಟಸ್ವಾಮಿ<br>ವಲಯ ಅರಣ್ಯಾಧಿಕಾರಿಗಳು (ಬಿಬಿಎಂಪಿ) |
| 5 | ಶ್ರೀ. ಗೋಪಾಲಕೃಷ್ಣ<br>ನೈಸ್ ಕಂಪನಿಯ ಅಭಿಯಂತರರು |
| 6 | ಶ್ರೀ. ಮಾಸ್ಟರ್ ಮಂಜುನಾಥ್<br>ಜಿ.ಎಂ. ಪಿ.ಆರ್.ಓ, ನೈಸ್ ಸಂಸ್ಥೆ |
| 7 | ಶ್ರೀ. ಇಸ್ಮಾಯಿಲ್<br>ತೋಟಗಾರಿಕಾ ಅಧಿಕಾರಿ, ನೈಸ್ ಸಂಸ್ಥೆ |

ಪರಿಶೀಲನಾ ಸಮಿತಿಯ ಅಧ್ಯಕ್ಷರು ಮತ್ತು ಇತರ ಸದಸ್ಯರನ್ನು ನೈಸ್ ಸಂಸ್ಥೆಯ ಜನರಲ್ ಮ್ಯಾನೇಜರ್ ಶ್ರೀ. ಮಂಜುನಾಥ್ ಸ್ವಾಗತಿಸುತ್ತಾ, ನೈಸ್ ಸಂಸ್ಥೆಯ ಇತರೆ ತಾಂತ್ರಿಕ ಅಧಿಕಾರಿ ವರ್ಗದವರನ್ನು ಪರಿಚಯ ಮಾಡಿಸುತ್ತಾ. ಬೆಂಗಳೂರು ನಗರದ ರಿಂಗ್ ರಸ್ತೆಯಿಂದ ಬಿಎಂಐಸಿ ರಸ್ತೆಗೆ ಲಿಂಕ್ ರಸ್ತೆಯ ಪ್ರವೇಶವಾಗುವ ಸ್ಥಳದಲ್ಲಿ ರಸ್ತೆ ಅಭಿವೃದ್ಧಿಗೆ ಅಡ್ಡವಾಗಿದ್ದ ಸುಮಾರು 23 ಆಕಾಶ ಮಲ್ಲಿಗೆ ಮರಗಳನ್ನು ಸ್ಥಳಾಂತರಗೊಳಿಸಿ ಬೆಳೆಸಲಾಗುತ್ತಿದ್ದ ಸ್ಥಳವನ್ನು ಸಮಿತಿಯು ವೀಕ್ಷಿಸಿತು. ಮಾನ್ಯ ಅಧ್ಯಕ್ಷರು ರಸ್ತೆ ಮೇಲೆ ಬಿದ್ದ ಮಳೆ ನೀರಿನ ಸದುಪಯೋಗದ ಕ್ರಮಗಳ ಬಗ್ಗೆ ಪ್ರಶ್ನಿಸಿ, ಅಂತರ್ಜಲ ಹೆಚ್ಚಿಸುವ ಇಂಗು ಗುಂಡಿಗಳ (Ground water recharge) ನಿರ್ಮಾಣ ಕೈಗೊಳ್ಳುವ ಬಗ್ಗೆ ತಿಳಿಸಿದರು. ಈ ನಿಟ್ಟಿನಲ್ಲಿ ಸ್ಥಳಗಳ ಮಳೆ ನೀರಿನ ಪ್ರಮಾಣ ಮತ್ತು ಪ್ರದೇಶದ ಇಳಿಜಾರು

(Gradient) ಮುಂತಾದ ತಾಂತ್ರಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಳೆನೀರಿನ ಇಂಗು ಗುಂಡಿಗಳನ್ನು ನಿರ್ಮಿಸುವ ಬಗ್ಗೆ ಮತ್ತು ಪ್ರಚಲಿತ 10 ರಿಂದ 20 ಜೀವವೈವಿಧ್ಯ ವಿಧಾನಗಳ ಅಳವಡಿಕೆ ಬಗ್ಗೆ ತಿಳಿಸುತ್ತಾ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯದ ಪುಷ್ಪ 'ನಂದಿ ಬಟ್ಟಲು' ಗುಂಡು ತೋಪು ರೀತಿಯಲ್ಲಿ ಅಭಿವೃದ್ಧಿ ಪಡಿಸಿದಲ್ಲಿ ಪರಿಸರವನ್ನು ಮತ್ತು ರಸ್ತೆಯಲ್ಲಿ ಸಂಚರಿಸುವವರ ಮನ ಮುದಗೊಳಿಸುವುದೆಂದು ತಿಳಿಸಿದರು. ಈ ಬಗ್ಗೆ ನೈಸ್ ಕಂಪನಿಯ ಅಧಿಕಾರಿಗಳು ಕ್ರಮಕೈಗೊಳ್ಳುವ ಬಗ್ಗೆ ಭರವಸೆ ನೀಡಿದರು.

ಸಮಿತಿಯು ಬಿಎಂಐಸಿ ರಸ್ತೆಯ ಕೆಂಗೇರಿಯಿಂದ ಪ್ರಾರಂಭವಾಗಿ ಬನ್ನೇರುಘಟ್ಟ ರಸ್ತೆಗೆ ಸೇರುವ ಫೆರಿಫರಲ್ ಲಿಂಕ್ ರಸ್ತೆವರೆಗೆ ಸಂಚರಿಸಿ ಈ ಮಾರ್ಗದಲ್ಲಿನ ಹಲವಾರು ಸ್ಥಳಗಳನ್ನು ಪರಿಶೀಲಿಸಿತು. ಈ ಸಂದರ್ಭದಲ್ಲಿ ಅಧ್ಯಕ್ಷರು ಮರಗಳಿಂದ ಉದುರೆಲೆಗಳನ್ನು (leaf litter) ಸಂಗ್ರಹಿಸಿ ಸಾವಯವ ಗೊಬ್ಬರ/ಕಾಂಪೋಸ್ಟ್ ತಯಾರಿಸಿ ಸದುಪಯೋಗಪಡಿಸಿಕೊಂಡು, ರಾಸಾಯನಿಕ ಗೊಬ್ಬರದ ಉಪಯೋಗ ತಡೆಗಟ್ಟಬಹುದೆಂದು ಅಭಿಪ್ರಾಯಪಟ್ಟರು. ಈಗಾಗಲೇ ಹೆಚ್ಚುತ್ತಿರುವ ಭೌಗೋಳಿಕ ತಾಪಮಾನವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಆದಷ್ಟು ಮಟ್ಟಿಗೆ ಈ ರಸ್ತೆಯ ಯೋಜನಾ ಪ್ರದೇಶದಲ್ಲಿ ಹಸಿರು ಹೊದಿಕೆ ಅಭಿವೃದ್ಧಿಗೆ ಗಮನ ನೀಡಬೇಕೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ವಾತಾವರಣ ತೇವಾಂದ ಪ್ರಾಮುಖ್ಯತೆಯು ಮಾನವನ ಆರೋಗ್ಯದ ಮೇಲೆ ಎಷ್ಟು ಅವಲಂಬಿತವಾಗಿದೆಯೆಂದು ತಿಳಿಸುತ್ತಾ, ಪ್ರತಿ ಮರವು, ಅಂದಾಜು 300 ರಿಂದ 400 ಲೀಟರ್‌ಗಳಷ್ಟು ತೇವಾಂಶವನ್ನು ಆವಿಯ ರೂಪದಲ್ಲಿ ವಾತಾವರಣಕ್ಕೆ ನೀಡಿ ಮಾನವನ ಶ್ವಾಶಕೋಶದ ಉತ್ತಮ ಆರೋಗ್ಯಕರ ಉಸಿರಾಟಕ್ಕೆ ಅನುವು ಮಾಡುವುದೆಂದು ತಿಳಿಸಿದರು. ಆಗ ಸಮಿತಿಯ ಸದಸ್ಯರು ಅಂತರಾಷ್ಟ್ರೀಯ ಪ್ರಖ್ಯಾತಿಯ ವೈದ್ಯರಾದ ಡಾ. ಪರಮೇಶ್ವರ್ ರವರು ಸಹ ಇದನ್ನು ಪುಷ್ಠೀಕರಿಸುತ್ತಾ ವಾತಾವರಣದ ತೇವಾಂಶ (Avian air) ಮಾನವನ ಉಸಿರಾಟ ಆರೋಗ್ಯಕರವಾಗಿರಲು ಅಗತ್ಯವೆಂದು ವೈಜ್ಞಾನಿಕ ಅಂಶಗಳನ್ನು ತಿಳಿಸಿದರು.

ಸಮಿತಿಯು ನೈಸ್ ರಸ್ತೆಯುದ್ದಕ್ಕೂ ಸಂಚರಿಸುವಾಗ, ನೈಸ್ ಸಂಸ್ಥೆಯ ತೋಟಗಾರಿಕಾ ಅಧಿಕಾರಿ ಶ್ರೀ. ಇಸ್ಮಾಯಿಲ್ ರವರು ರಸ್ತೆಯ ಎರಡು ಬದಿಗಳಲ್ಲಿ ಹೊಂಗೆ ಮತ್ತು ಬೇವು ಗಿಡಗಳನ್ನು ನೆಟ್ಟಿರುವ ಬಗ್ಗೆ ತಿಳಿಸಿದಾಗ, ಮಾನ್ಯ ಅಧ್ಯಕ್ಷರು ಹೊಂಗೆ, ಬೇವು ಗಿಡಗಳ ಮಧ್ಯದ ಸ್ಥಳಗಳಲ್ಲಿ ಶ್ರೀಗಂಧದ ಗಿಡಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲು ಹಾಗೂ ಶಿಲಾ ಪದರಗಳ ಸ್ಥಳಗಳಲ್ಲಿ Zerophytic Plants ಗಳನ್ನು ರಾಕ್ ಗಾರ್ಡನ್/ಶಿಲಾ ಉದ್ಯಾನವನ ಮಾದರಿಯಲ್ಲಿ ಜೀವವೈವಿಧ್ಯತೆಯನ್ನು ಅಭಿವೃದ್ಧಿಪಡಿಸಬಹುದೆಂದು ಅಭಿಪ್ರಾಯಪಟ್ಟರು.

ಸಮಿತಿಯ ಸದಸ್ಯರಾದ ಡಾ.ಡಿ.ಸಿ ಶರ್ಮಾರವರು ಮಳೆನೀರಿನ ಸದುಪಯೋಗವಾಗದೇ ಹಲವಾರು ಹೊಂಡಗಳು ನೀರಿನ ಹರಿವಿಲ್ಲದೆ ಖಾಲಿ ಇರುವುದನ್ನು ಗಮನಿಸಿ ಸೂಕ್ತ ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದರು. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಸಹ ರಸ್ತೆ ಅಭಿವೃದ್ಧಿ ಕಾರ್ಯಕ್ರಮದಲ್ಲಿ ನೈಸ್ ಸಂಸ್ಥೆಯು ತೇವಯುಕ್ತ ಭೂ ಅಭಿವೃದ್ಧಿ (Wetland) ವಿಧಾನಗಳು ಕೈಗೊಳ್ಳದಿರುವ ಬಗ್ಗೆ ನೈಸ್ ಅಧಿಕಾರಿಗಳಲ್ಲಿ ಪ್ರಶ್ನಿಸಲಾಗಿ, ನೈಸ್ ಸಂಸ್ಥೆಯ ಅಧಿಕಾರಿಗಳು, ಜೌಗು ಪ್ರದೇಶ ಜಲಾಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ (MOU) ದಲ್ಲಿ ನಮೂದಾಗದೇ ಇರುವ ಬಗ್ಗೆ ಸಮಿತಿಗೆ ತಿಳಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಮಾನ್ಯ ಅಧ್ಯಕ್ಷರು ನೈಸ್ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ಜೌಗು ಜಲಾಭಿವೃದ್ಧಿ ಪ್ರದೇಶಗಳನ್ನು (Wet land formation) ಕೈಗೊಳ್ಳುವ ಬಗ್ಗೆ

ನಿರ್ದೇಶನ ನೀಡಿದರು. ರಸ್ತೆ ನಿರ್ಮಾಣದ ಪ್ರದೇಶದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಕಲ್ಲುಗಳಿದ್ದಲ್ಲಿ ಅಂತಹ ಪ್ರದೇಶಗಳಲ್ಲಿ ಮಾಕಳಿ ಬೇರು, ಸೊಗದೆ ಬೇರು ಮುಂತಾದ ಕಲ್ಲು ಪೊಟರೆಗಳಲ್ಲಿ ಸುಗಮವಾಗಿ ಬೆಳೆಯುವ ಗಿಡ ಮರಗಳನ್ನು ಬೆಳೆಸಲು ನಿರ್ದೇಶಿಸಿದರು. ನೈಸ್ ರಸ್ತೆಯ ಇಕ್ಕೆಲಗಳಲ್ಲಿ ಅಲ್ಲಲ್ಲಿ ಅಲ್ಯುಮಿನಿಯಂ ನಿರ್ಮಿತ ರೋಡ್ ಗಾರ್ಡ್‌ಗಳನ್ನು ಅಳವಡಿಸಿರುವುದನ್ನು ಕಂಡು ಇದು ರಸ್ತೆಯ ವಾತಾವರಣದ ಉಷ್ಣಾಂಶವನ್ನು ಹೆಚ್ಚಿಸುವುದನ್ನು ಸಂಸ್ಥೆಯ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರು ಅಂತಹ ರೋಡ್ ಗಾರ್ಡ್‌ಗಳಿಗೆ ಬಳ್ಳಿಗಳನ್ನು (Creepers) ಬೆಳೆಸಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ಈಗ ಹಾಲಿ ರೋಡ್ ಗಾರ್ಡ್‌ಗಳ ಮೇಲೆ ನೈಸರ್ಗಿಕವಾಗಿ ಬೆಳೆದಿರುವ ಬಳ್ಳಿಗಳನ್ನು ತೆರವುಗೊಳಿಸದೇ ಅಭಿವೃದ್ಧಿಪಡಿಸಬೇಕೆಂದು ಆದೇಶಿಸಿದರು.

ಸಮಿತಿಯು, ನೈಸ್ ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ ಮನೆ/ಜಮೀನು ಕಳೆದುಕೊಂಡ ಹಳ್ಳಿಗರಿಗೆ ನೈಸ್ ಸಂಸ್ಥೆಯು ಮನೆಗಳನ್ನು ಕಟ್ಟಿಸಿಕೊಟ್ಟು ಪುನರ್ವಸತಿ ಕಲ್ಪಿಸಿ ಕೊಟ್ಟಿರುವ ಬಗ್ಗೆ ವೀಕ್ಷಿಸಿ ಅಲ್ಲಿನ ಜನರೊಂದಿಗೆ ಸಂವಾದ ನಡೆಸಿತು. ಮಾನ್ಯ ಅಧ್ಯಕ್ಷರು ಪುನರ್ವಸತಿ ಕಲ್ಪಿಸಿದ ಜನರಿಗೆ ಅವರಿಗೆ ಸರಿಹೊಂದುವ ಪರಿಸರ ನಿರ್ಮಾಣಗೊಳಿಸಲು ನೈಸ್ ಸಂಸ್ಥೆ ಅಧಿಕಾರಿಗಳಿಗೆ ಸೂಚಿಸಿದರು.

ಸಮಿತಿಯು ದಿನಾಂಕ: 20-09-2008 ರಂದು ಎರಡನೇ ಹಂತದ ನೈಸ್ ರಸ್ತೆಯ ಅಭಿವೃದ್ಧಿ ಕಾಮಗಾರಿ ವೀಕ್ಷಣಾ ಭೇಟಿಯನ್ನು ನಿಗಧಿಗೊಳಿಸಿತು ಮತ್ತು ಮಾನ್ಯ ಅಧ್ಯಕ್ಷರು ಮುಂದಿನ 15 ದಿನಗಳೊಳಗೆ ನೈಸ್ ಸಂಸ್ಥೆಯು ಅದರ "ಯೋಜನಾ ಮುಖ್ಯಾರ್ಥ" (Power point presentation) ಮಾಡುವ ಬಗ್ಗೆ ತಿಳಿಸಿ, ಈ ಬಗ್ಗೆ ದಿನಾಂಕ ನಿಗದಿಸಿ ಎಲ್ಲಾ ಸಮಿತಿ ಸದಸ್ಯರಿಗೆ ತಿಳುವಳಿಕೆ ಪತ್ರ ಕಳುಹಿಸುವ ಬಗ್ಗೆ ಮಾನ್ಯ ಅಧ್ಯಕ್ಷರು ಸಮಿತಿಯ ಸದಸ್ಯ ಕಾರ್ಯದರ್ಶಿಯವರಿಗೆ ಆದೇಶ ನೀಡಿ ಈ ದಿನದ ಪರಿವೀಕ್ಷಣಾ ಭೇಟಿಯನ್ನು ಎಲ್ಲರಿಗೂ ಶುಭ ಕೋರುವ ಮೂಲಕ ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ಸುಸ್ಥಿರ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ
ಬೆಂಗಳೂರು